Kerala Board



Question Paper

2024

aglasem.com

SY-506

Reg. No. : .....

Name : .....

SECOND YEAR HIGHER SECONDARY EXAMINATION, MARCH – 2024

Part – II

KANNADA (Language)

Maximum : 80 Scores

Time : **2½** Hours

Cool-off time : **15** Minutes

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ. **(4 × 1 = 4)**

1. 'ಘಾಲ್ಕೆ ಪ್ರಶಸ್ತಿ'ಯನ್ನು ಪಡೆದ ಮೊದಲ ಕನ್ನಡ ನಟ ಯಾರು ?

   (ಡಾ. ವಿಷ್ಣುವರ್ಧನ್, ಅಂಬರೀಶ್, ಅನಂತನಾಗ್, ಡಾ. ರಾಜ್ ಕುಮಾರ್)

2. ಮಾಂತ್ರಿಕನ ಮಾಯಾದಂಡದಲ್ಲಿ ಥಟ್ಟನೆ ರೂಪುಗೊಂಡ ಮಾಯಾಲೋಕ ಯಾವುದು ?

   (ಪಿಚ್ ಬ್ಲೆಂಡ್, ಯುರೇನಿಯಂ, ರೇಡಿಯಂ, ಪೊಲೋನಿಯಂ)

3. 'ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು' ಎಂಬ ಸಾಲುಗಳನ್ನು ಬರೆದವರು.

   (ಜಿ.ಎಸ್. ಶಿವರುದ್ರಪ್ಪ, ರೂಪಾ ಹಾಸನ, ಡಾ. ಸಿದ್ಧಲಿಂಗಯ್ಯ, ಕಯ್ಯಾರ ಕಿಞ್ಞಣ್ಣ ರೈ)

4. 'ಸುಬ್ಬಣ್ಣ' ಪಾಠವು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರಿದೆ ?

   (ಸಣ್ಣಕಥೆ, ಪ್ರಬಂಧ, ಕಾದಂಬರಿ, ವಿಮರ್ಶೆ)

5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ. **(4 × 1 = 4)**

5. ಮನವೆಲ್ಲ – ಈ ಪದವನ್ನು ವಿಂಗಡಿಸಿ ಬರೆಯಿರಿ.

6. ವರ್ಣ – ಈ ಪದದ ತದ್ಭವ ರೂಪವನ್ನು ಬರೆಯಿರಿ.

7. ನವಿಲನ್ನೇರಿ ಪ್ರಪಂಚ ಪರ್ಯಟನಕ್ಕೆ ಹೊರಟವರು – ಅಡಿಗೆರೆ ಎಳೆದ ಪದದ ಅರ್ಥವೇನು ?

8. ಮೊನ್ನೆ ನಡೆದ ಪರೀಕ್ಷೆಯ ಪೇಪರು ನಮಗೆ ಇಂದು ದೊರಕಿತು – ಈ ವಾಕ್ಯದಲ್ಲಿ ಬಂದಿರುವ ಅನ್ಯದೇಶೀಯ ಪದವನ್ನು ಗುರುತಿಸಿರಿ.

9. ಅರಮನೆ – ಈ ಪದವನ್ನು ವಿಗ್ರಹಿಸಿ ಬರೆಯಿರಿ.

10. ಊಟಕ್ಕೆ ಬರುವಂತೆ ತಾಯಿಯು ಮಗನನ್ನು ಕರೆದಳು. – ಅಡಿಗೆರೆ ಎಳೆದ ಪದದ ನಿಷೇಧ ರೂಪವನ್ನು ಹೆಸರಿಸಿರಿ.

11 ರಿಂದ 16 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ. **(5 × 2 = 10)**

11. ಅಮ್ಮ – ಈ ಪದಕ್ಕೆ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

12. ಕೆಳಗೆ ನೀಡಲಾದ ವಾಕ್ಯದಲ್ಲಿ ಅಡಿಗೆರೆ ಎಳೆದಿರುವ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಹೆಸರಿಸಿರಿ.
ಅಂದು ರಾತ್ರಿ ಪಿಯರ್ ಕೋಣೆಯಲ್ಲಿ ನಡೆಯುತ್ತಿದ್ದನು. ಮೇರಿ ಉಡುಪೊಂದನ್ನು ಹೊಲಿಯುತ್ತಿದ್ದಳು.

13. ಸೂಕ್ತವಾದ ಲೇಖನ ಚಿಹ್ನೆಯನ್ನು ಬಳಸಿಕೊಂಡು ವಾಕ್ಯವನ್ನು ಪುನಃ ಬರೆಯಿರಿ.
ವೆಂಕಟರಮಣನು ಸುಬ್ಬಣ್ಣನಲ್ಲಿ ಯಾವ ಊರು ಸ್ವಾಮಿ ನಿಮ್ಮದು ಎಂದು ಕೇಳಿದನು ಆಗ ಸುಬ್ಬಣ್ಣನವರು ಬೇಸರದಿಂದ ಯಾವುದೋ ಊರು ಎಂದರು.

14. ಪ್ರಕೃತಿ ಸಂರಕ್ಷಣೆಯ ಮಹತ್ವವನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

15. ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.
ಸೈನಿಕರ ಕಣ್ಣಿಗೆ ಮಣ್ಣೆರಚಿ ದರೋಡೆಕೋರರು ಪರಾರಿಯಾದರು.

16. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ವಿಂಗಡಿಸಿ ಬರೆಯಿರಿ.
ನೀರು ಹಾವೊಂದು ದೊಡ್ಡ ಡೊಂಗರು ಕಪ್ಪೆಯನ್ನು ಕೆರೆಯ ದಡದಿಂದ ಹಿಡಿದು ಬಳಿಕ ನುಂಗಲು ಪ್ರಯಾಸ ಪಡುತ್ತಿತ್ತು.

17 ರಿಂದ 21 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ. **(4 × 3 = 12)**

17. ಕೆಳಗೆ ನೀಡಲಾದ ಗ್ರಾಮ್ಯ ಭಾಷೆಯ ವಾಕ್ಯಗಳನ್ನು ಶಿಷ್ಟಗನ್ನಡ ರೂಪಕ್ಕೆ ಪರಿವರ್ತಿಸಿ ಬರೆಯಿರಿ.
"ಅವ್ವ ಅಳಬೇಡಾಂದ್ರೆ ಕೇಳಲ್ವೇನವ್ವ ?"
"ನಿಂಗೆ ಇನ್ನೂ ನಿದ್ದೇನೇ ಹತ್ತಿಲ್ವಾ ಮಗಾ"
"ನೀನಳ್ತಾ ಇದ್ರೆ ನಾನು ನಿದ್ದೇನೇ ಮಾಡಲ್ಲ"

18. ಸರಿಹೊಂದಿಸಿ ಬರೆಯಿರಿ.

ಅ	ಆ
ನಂಜುಂಡ ಕವಿ	ಗುರುವಚನಮಲಂಘನೀಯಂ
ಕಯ್ಯಾರ ಕಿಞ್ಞಣ್ಣ ರೈ	ನಾಡಸಿರಿ
ರನ್ನ	ಊರ್ಮಿಳಾ

19. ಕೆಳಗೆ ನೀಡಲಾದ ತ್ರಿಪದಿಯ ಆಶಯವನ್ನು ಬರೆಯಿರಿ.
ಗುರಿಯ ತಾಗದ ಬಾಣ ನೂರಾರನೆಸೆದೇನು ?
ಬರಿ ಮಾತಾಡಿ ಫಲವೇನು – ನಿಜಗುಣದ
ಅರಿವಿಲ್ಲದಿರಲು – ಸರ್ವಜ್ಞ

20. "ಇದಕ್ಕೇ ಏನು ಹೊಟ್ಟೆ ಬಟ್ಟೆಯ ಕಟ್ಟಿ ನಾನು ಇವರನ್ನು ಓದಿಸಿದ್ದು ?" 'ಅವರವರ ದಾರಿ' ಕವನದಲ್ಲಿ ಬಂದಿರುವ ಈ ಸಾಲಿನ ಸಂದರ್ಭವನ್ನು ತಿಳಿಸಿರಿ.

21. ಕೆಳಗೆ ನೀಡಲಾದ ಇಂಗ್ಲೀಷ್ ವಾಕ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿರಿ.
Cricket is a popular game played in many countries. It involves two teams.

22 ರಿಂದ 26 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ. **(4 × 4 = 16)**

22. ಕೆಳಗೆ ನೀಡಲಾದ ಶತಕದ ಸಾಲುಗಳಲ್ಲಿ ಅಡಕವಾಗಿರುವ ಜೀವನಮೌಲ್ಯವನ್ನು ಗುರುತಿಸಿ ಟಿಪ್ಪಣಿಯೊಂದನ್ನು ಬರೆಯಿರಿ.
ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ
ಒಣಗಲ್ವೆಲ್ರಿಗೆ ಬಾರದಿರ್ದ ಮಳೆ ತಾಂ ಬಂದೇನದಾಪತ್ತಿನೊಳ್
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೆಲ್ಲದಿದಾ
ತೃಣವೇ ಪರ್ವತವಲ್ಲವೇ ಹರಹರಾ ಶ್ರೀ ಚೆನ್ನಸೋಮೇಶ್ವರಾ

23. ರೇಡಿಯಂ ಸಂಶೋಧನೆಗಾಗಿ ಮೇರಿ ಪಿಯರ್ ದಂಪತಿಗಳಿಗೆ ದೊರಕಿದ ಮುರುಕಲು ಕೊಠಡಿ ಹೇಗಿತ್ತು ? ವಿವರಿಸಿರಿ.

24. 'ಜಾಲಿಯ ಮರದಂತೆ' ಕೀರ್ತನೆಯಲ್ಲಿ ಪುರಂದರದಾಸರು ದುರ್ಜನರ ಸ್ವಭಾವವನ್ನು ಹೇಗೆ ವಿಡಂಬಿಸಿರುವರು ? ಸ್ಪಷ್ಟಪಡಿಸಿರಿ.

25. ಚಲನಚಿತ್ರ ನಟನೆಯಲ್ಲಿ ಆಸಕ್ತಿಯನ್ನು ಹೊಂದಿರುವ ನೀವು, ನಿಮ್ಮೂರಲ್ಲಿ ಹೊಸದಾಗಿ ಚಿತ್ರೀಕರಣಗೊಳ್ಳುವ ಚಲನಚಿತ್ರದಲ್ಲಿ ಅಭಿನಯಿಸಲು ಆಸಕ್ತರಾಗಿದ್ದೀರಿ. ತಮಗೊಂದು ಅವಕಾಶವನ್ನು ಕೊಡುವಂತೆ ಸಿನೆಮಾ ನಿರ್ಮಾಪಕರನ್ನು ವಿನಂತಿಸುವ ಮನವಿಪತ್ರವನ್ನು ತಯಾರಿಸಿರಿ.

26. ಅಪ್ಪನು ಒಲೆ ಉರಿಸಲು ಮಾಡುವ ಸಿದ್ಧತೆಯನ್ನು ಕವಯತ್ರಿ ಹೇಗೆ ತಮ್ಮ ಕವನದಲ್ಲಿ ನಿರೂಪಿಸಿದ್ದಾರೆ ? ಸ್ಪಷ್ಟಪಡಿಸಿರಿ.

27 ರಿಂದ 30 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. **(3 × 6 = 18)**

27. ಅಸಹಾಯಕ ನಾಯಿಯೊಂದರ ದುರಂತ ಕಥೆ 'ನೆರೆ' ಪಾಠದಲ್ಲಿ ನಿರೂಪಿತವಾದ ಬಗೆಯನ್ನು ವಿಮರ್ಶಾತ್ಮಕವಾಗಿ ಬರೆಯಿರಿ.

28. "ಯಾವುದೇ ಕಾರ್ಯವನ್ನಾದರೂ ತನ್ನಿಂದಾಗಲು ಎಂದು ಕೈಕಟ್ಟಿ ಕುಳಿತರೆ ಕಾರ್ಯ ಸಾಗದು" ಎಂಬ ಆಶಯವು 'ಆಗದು ಎಂದು' ಚಲನಚಿತ್ರ ಗೀತೆಯಲ್ಲಿ ಹೇಗೆ ಮೂಡಿಬಂದಿದೆ ? ವಿಶ್ಲೇಷಿಸಿರಿ.

29. 'ತರುಣ ಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು' ಕಾವ್ಯಭಾಗದಲ್ಲಿ ಚಂದ್ರಮತಿಯ ಪಾವಿತ್ರ್ಯತೆ ವ್ಯಕ್ತವಾದ ಬಗೆ ಹೇಗೆ ? ವಿಷದಪಡಿಸಿರಿ.

30. ಶ್ರೀಮಂತರಿಂದ ತುಳಿತಕ್ಕೊಳಗಾದ ಬಡವರವರ ಪ್ರತಿಭಟನೆಯು 'ಸಾವಿರಾರು ನದಿ'ಯಾಗಿ ಮೂಡಿಬಂದ ಬಗೆ ಹೇಗೆ ? ವಿವರಿಸಿರಿ.

31 ರಿಂದ 33 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. **(2 × 8 = 16)**

31. ಕತೆಯೊಳಗೊಂದು ಕತೆ ಸೇರಿಕೊಂಡು ರಚನೆಗೊಂಡಿರುವ 'ತಾಯಿ' ಕಥೆಯ ಮುಖ್ಯಾಂಶಗಳನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

32. "ಕಪ್ಪೆ ಜಿಹ್ವೇಂದ್ರಿಯಕ್ಕೆ ದಾಳಿ ಮಾಡಿದರೆ ಆಮೆ ಘ್ರಾಣೇಂದ್ರಿಯವನ್ನು ಅಸ್ತವ್ಯಸ್ತಗೊಳಿಸಿತು" – 'ಕೆರೆಯ ದಡದಲ್ಲಿ' ಪಾಠಭಾಗದಲ್ಲಿ ಬಂದಿರುವ ಈ ಮಾತು ಕಪ್ಪೆ ಹಾಗೂ ಆಮೆಯ ಸ್ವರಕ್ಷಣಾ ತಂತ್ರವನ್ನು ಸೂಚಿಸುತ್ತದೆ. ಈ ಘಟನೆಯ ಸ್ವಾರಸ್ಯಕರ ಅಂಶಗಳನ್ನು ವಿವರಿಸಿಕೊಂಡು ಪ್ರಬಂಧವೊಂದನ್ನು ಬರೆಯಿರಿ.

33. ತನ್ನ ನಡತೆಯಿಂದ ಈ ತರುಣ ಯುವಕನು ಸುಬ್ಬಣ್ಣನವರನ್ನು ಪುನಃ ಪ್ರಾಪಂಚಿಕ ಜೀವನಕ್ಕೆ ಕಟ್ಟಿ ಹಾಕಿದನು – 'ಸುಬ್ಬಣ್ಣ' ಕಿರು ಕಾದಂಬರಿಯಲ್ಲಿ ಬರುವ ಈ ಮಾತನ್ನು ಆಧಾರವಾಗಿರಿಸಿಕೊಂಡು ವೆಂಕಟರಮಣನ ಪಾತ್ರಚಿತ್ರಣ ಮಾಡಿರಿ.

QUESTION PAPERS

GET PREVIOUS YEAR QUESTION PAPERS FOR ALL CLASSES FOR CBSE, ISCSE, ISC AND ALL ALL STATE BOARDS HERE AT AGLASEM.COM

BOARD WISE

- Andhra Pradesh Board Question Papers
- Assam Board Question Papers
- Bihar Board Question Papers
- Chhattisgarh Board Question Papers
- Goa Board Question Papers
- Gujarat Board Question Papers
- Haryana Board Question Papers
- Himachal Pradesh Board Question Papers
- J&K State Board Question Papers
- Jharkhand Board Question Papers
- Karnataka Board Question Papers
- Kerala Board Question Papers
- Madhya Pradesh Board Question Papers
- Maharashtra State Board Question Papers
- Manipur Board Question Papers
- Meghalaya Board Question Papers
- Mizoram Board Question Papers
- Nagaland Board Question Papers
- Orissa Board Question Papers
- Punjab Board Question Papers
- Rajasthan Board Question Papers
- Tamil Nadu Board Question Papers
- Telangana State Board Question Papers
- Tripura Board Question Papers
- Uttarakhand Board Question Papers
- Uttar Pradesh (UP) Board Question Papers
- West Bengal (WB) Board Question Papers